


# ಬಿಎಸ್‌ಎನ್‌ಎಲ್ ಬಂತು ವೈಫೈ ಕರೆ

**ಟಾಟಾ ಜೊತೆಗೆ ಕೈಜೋಡಿಸಿದ ಬಳಿಕ ಬಿಎಸ್‌ಎನ್‌ಎಲ್‌ಗೆ ಮರುಜೀವ ಸಿಕ್ಕಿದ್ದು, ಪ್ರತಿಸ್ಪರ್ಧಿ ಟೆಲಿಕಾಂ ಸಂಸ್ಥೆಗಳಿಗೆ ಟಕ್ಕರ್ ಕೊಡುವ ನಿಟ್ಟಿನಲ್ಲಿ ಸಾಗುತ್ತಿದೆ. ವೈಫೈ ಕರೆ ಮಾಡುವ, ಸಂದೇಶ ರವಾನಿಸುವ ಸೌಲಭ್ಯ ಕಲ್ಪಿಸಿ ಎಲ್ಲರ ಹುಬ್ಬೇರುವಂತೆ ಮಾಡಿದೆ.**

**■ ಶಶಿಕುಮಾರ್ ಸಿ.**

ನೆಟ್‌ವರ್ಕ್ ಹೊರತಾಗಿಯೂ ವೈಫೈ ಮೂಲಕ ಕರೆ ಮಾಡುವ, ಸಂದೇಶ ರವಾನೆ ಮಾಡುವ ಸೇವೆಯನ್ನು ಈಗಾಗಲೇ ಎಲ್ಲ ಟೆಲಿಕಾಂ ಸಂಸ್ಥೆಗಳು ಪರಿಚಯಿಸಿವೆ. ಇದರ ನಡುವೆ ಮೈಕೊಡವಿ ನಿಂತಂತಿರುವ ಸರ್ಕಾರಿ ಸ್ವಾಮ್ಯದ ಬಿಎಸ್‌ಎನ್‌ಎಲ್ 'ವೈಫೈ ಕರೆ, ಸಂದೇಶ' ಸೌಲಭ್ಯಕ್ಕೆ ಮುನ್ನುಡಿ ಬರೆದಿದೆ.

ಹೊಸ ವರ್ಷದ ಪ್ರಾರಂಭದಲ್ಲೇ ಬಿಎಸ್‌ಎನ್‌ಎಲ್ ತನ್ನ ಎಲ್ಲಾ ಬಳಕೆದಾರರಿಗಾಗಿ 'ವಾವೈಫೈ' (ವಾಯ್ಸ್‌ಓವರ್ ವೈಫೈ) ಹೆಸರಿನ ಫೀಚರ್ ಪರಿಚಯಿಸಿದೆ. ಈ ಫೀಚರ್ ಬಳಸಿಕೊಂಡು ದೇಶದ ಎಲ್ಲ ಬಿಎಸ್‌ಎನ್‌ಎಲ್ ಟೆಲಿಕಾಂ ಬಳಕೆದಾರರು ಧ್ವನಿ–ವಿಡಿಯೊ ಕರೆ ಹಾಗೂ ಸಂದೇಶ ರವಾನೆಗೆ ವೇದಿಕೆ ಕಲ್ಪಿಸಿದೆ. ಮೊಬೈಲ್ ನೆಟ್‌ವರ್ಕ್ ಸರಿಯಾಗಿ ಲಭ್ಯವಿಲ್ಲದ ಪ್ರದೇಶಗಳ ಜನರಿಗೆ ಇದು ಬಹುಪಯುಕ್ತ. ಮನೆಗಳು, ಕಚೇರಿಗಳು, ನೆಲಮಾಳಿಗೆಗಳು ಅಥವಾ ಕುಗ್ರಾಮದಂತಹ ಪ್ರದೇಶಗಳಲ್ಲಿಯೂ ಸಹ ನಿರಂತರ ಸಂವಹನ ಸೇವೆ ಒದಗಿಸಲು ಈ ಯೋಜನೆಯನ್ನು ಟಾಟಾ ಸಹಯೋಗದೊಂದಿಗೆ ಬಿಎಸ್‌ಎನ್‌ಎಲ್ ರೂಪಿಸಿದೆ.

ದೇಶದ ಎಲ್ಲಾ ಬಿಎಸ್‌ಎನ್‌ಎಲ್ ಗ್ರಾಹಕರಿಗೆ ಈ ಸೇವೆ ಲಭ್ಯವಿದೆ ಎಂದು ಸಂವಹನ ಸಚಿವಾಲಯವು ಹೇಳಿದೆ. 'ವೊವೈಫೈ' ರಿಮೋಟ್ ಪ್ರದೇಶಗಳಲ್ಲಿ, ಕುಗ್ರಾಮಗಳಲ್ಲೂ ನಿರಂತರ ಮತ್ತು ಉತ್ತಮ ಗುಣಮಟ್ಟದ ಸಂಪರ್ಕ ಒದಗಿಸುತ್ತದೆ.

ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಇಂದಿಗೂ ಟೆಲಿಕಾಂ ಸೇವೆ ಸಮರ್ಪಕವಾಗಿ ತಲುಪಿಲ್ಲ. ಅಂಥವರಿಗೆ ಈ ಸೇವೆ ವಿಶೇಷವಾಗಿ ಪ್ರಯೋಜನಕಾರಿಯಾಗಿದೆ. ಅಂಥವರಿಗೆ ಉತ್ತಮ ವೈಫೈ ಕನೆಕ್ಷನ್ ಅಗತ್ಯವಿದ್ದು, ಅದನ್ನು ಒದಗಿಸುವ ನಿಟ್ಟಿನಲ್ಲೂ ಬಿಎಸ್‌ಎನ್‌ಎಲ್ ಸಕ್ರಿಯವಾಗಿದೆ. ಜನರು ವೈಫೈ ಕರೆ ಮಾಡುವುದರತ್ತ ಹೆಚ್ಚು ಆದ್ಯತೆ ತೋರುವುದರಿಂದ ಸಾಮಾನ್ಯ ನೆಟ್‌ವರ್ಕ್ ಮೇಲಿನ ದಟ್ಟಣೆಯನ್ನು ಕಡಿಮೆ ಮಾಡುತ್ತದೆ. ಅದರಿಂದ ಸಾಧ್ಯವಾದಷ್ಟು ಮಂದಿಗೆ ಸಮರ್ಪಕ ಸೇವೆ ಒದಗಿಸಲು ಪರೋಕ್ಷವಾಗಿ ನೆರವಾಗುತ್ತದೆ. ವೈಫೈ ಮೂಲಕ ಧ್ವನಿ ಹಾಗೂ ವಿಡಿಯೊ ಕರೆ ಮಾಡಲು ಯಾವುದೇ ಹೆಚ್ಚುವರಿ ಶುಲ್ಕ ಪಾವತಿಸುವ ಅಗತ್ಯವಿಲ್ಲ. ಇದು ಸಾಮಾನ್ಯ ರೀಚಾರ್ಜ್ ಪ್ಲಾನ್‌ಗಳಲ್ಲಿಯೂ ಲಭ್ಯವಾಗಲಿದೆ.

## ಇದು ಹೇಗೆ ಕಾರ್ಯನಿರ್ವಹಿಸುತ್ತದೆ?

'ವೊವೈಫೈ' ಇಂಟರ್‌ನೆಟ್ ಪ್ರೋಟೋಕಾಲ್ ಮಲ್ಟಿಮೀಡಿಯಾ ಸಬ್‌ಸಿಸ್ಟಮ್ (IMS) ಪ್ಲಾಟ್‌ಫಾರ್ಮ್‌ನಲ್ಲಿ ಕಾರ್ಯನಿರ್ವಹಿಸುತ್ತದೆ. ಇದು ವೈಫೈ ಮತ್ತು ಮೊಬೈಲ್ ನೆಟ್‌ವರ್ಕ್‌ಗಳ ನಡುವೆ ಸರಾಗ ಬದಲಾವಣೆಗೆ ಅನುವು ಮಾಡಿಕೊಡುತ್ತದೆ. ಬಳಕೆದಾರರು ತಮ್ಮ ಅಸ್ತಿತ್ವದಲ್ಲಿರುವ ಮೊಬೈಲ್ ಸಂಖ್ಯೆ ಮತ್ತು ಅವರ ಫೋನ್‌ನ ಡಯಲರ್ ಅಪ್ಲಿಕೇಷನ್ ಅನ್ನೇ ಬಳಸಿಕೊಂಡು ಕರೆಗಳನ್ನು ಮಾಡಬಹುದು. ಸಂದೇಶಗಳನ್ನೂ ಕಳುಹಿಸಬಹುದು. ಇದಕ್ಕಾಗಿ ಪ್ರತ್ಯೇಕ ಅಪ್ಲಿಕೇಷನ್‌ನ ಅಗತ್ಯವಿಲ್ಲ ಎಂಬುದು ಸಚಿವಾಲಯದ ಪ್ರಕಟಣೆ.

ಸಾಮಾನ್ಯವಾಗಿ ಕರೆ ಮಾಡಲು ನಿಮ್ಮ ಫೋನ್ ಹತ್ತಿರದ ಮೊಬೈಲ್ ಟವರ್‌ನ ಹುಡುಕುತ್ತದೆ. ಆದರೆ ವೈಫೈ ಕಾಲಿಂಗ್‌ನಲ್ಲಿ ನಿಮ್ಮ ಧ್ವನಿ ಕರೆಯು ಅಥವಾ ವಿಡಿಯೊ ಕರೆಯು ಸಣ್ಣ ಸಣ್ಣ ಡೇಟಾ ಪ್ಯಾಕೆಟ್‌ಗಳಾಗಿ ಪರಿವರ್ತನೆಗೊಂಡು, ಇಂಟರ್‌ನೆಟ್ ಮೂಲಕ ಬಿಎಸ್‌ಎನ್‌ಎಲ್ ಸರ್ವರ್‌ಗೆ ತಲುಪುತ್ತದೆ. ಅಲ್ಲಿಂದ ಅದು ನೀವು ಕರೆ ಮಾಡುವ ವ್ಯಕ್ತಿಯನ್ನು ತಲುಪುತ್ತದೆ. ಮನೆಯೊಳಗೆ, ಬೇಸ್‌ಮೆಂಟ್‌ನಲ್ಲಿ ನೆಟ್‌ವರ್ಕ್ ಇಲ್ಲದಿದ್ದರೂ, ವೈಫೈ ಇದ್ದರೆ ಸಾಕು, ಗುಣಮಟ್ಟದ ಕರೆಗಳನ್ನು ಮಾಡಬಹುದು.

## ಸೌಲಭ್ಯ ಪಡೆಯಲು ಏನು ಬೇಕು?

ಈ ನಿರ್ದಿಷ್ಟ ಸೌಲಭ್ಯವನ್ನು ಪಡೆಯಲು ಗ್ರಾಹಕರ ಬಳಿ ಹೊಸ ಸ್ಮಾರ್ಟ್‌ಫೋನ್‌ಗಳು ಇರಬೇಕು. ನಿಮ್ಮ ಸ್ಮಾರ್ಟ್‌ಫೋನ್ 'ವೊವೈಫೈ' ತಂತ್ರಜ್ಞಾನವನ್ನು ಬೆಂಬಲಿಸುವಂತಿರಬೇಕು. ಇತ್ತೀಚಿನ ಬಹುತೇಕ 4ಜಿ ಮತ್ತು 5ಜಿ ಫೋನ್‌ಗಳಲ್ಲಿ ಈ ಸೌಲಭ್ಯವಿದೆ. ಬಿಎಸ್‌ಎನ್‌ಎಲ್ ಸಿಮ್‌ನಲ್ಲಿ ಸಕ್ರಿಯ ರೀಚಾರ್ಜ್ ಪ್ಲಾನ್ ಇರಬೇಕು.

## ಗಮನಿಸಬೇಕಾದ ಅಂಶಗಳೇನು?

ವೈಫೈ ಕಾಲಿಂಗ್ ಆಯ್ಕೆಯು ಆನ್ ಆಗಿದ್ದಾಗ, ನಿಮ್ಮ ಫೋನ್‌ನ ಸ್ಟೇಟಸ್ ಬಾರ್‌ನಲ್ಲಿ (Status Bar) ವೈಫೈ ಐಕಾನ್ ಜೊತೆಗೆ ಚಿಕ್ಕದಾದ ಫೋನ್ ಗುರುತು ಕಾಣಿಸಿಕೊಳ್ಳುತ್ತದೆ. ಅದು ಕಂಡರಷ್ಟೇ ನಿಮ್ಮ ಫೋನ್‌ನ ಮೂಲಕ ವೈಫೈ ಕರೆ ಮಾಡಬಹುದು. ನೀವು ವೈಫೈ ವ್ಯಾಪ್ತಿಯಿಂದ ಹೊರಗೆ ಹೋದರೆ, ಕರೆ ಕಟ್ ಆಗದೆ ತಂತಾನೆ ಮೊಬೈಲ್ ನೆಟ್‌ವರ್ಕ್‌ಗೆ (VoLTE) ವರ್ಗಾವಣೆಯಾಗುತ್ತದೆ. ■

## 'ವೊವೈಫೈ' ಸಕ್ರಿಯ ಹೇಗೆ?

ಟೆಲಿಕಾಂ ಕಂಪನಿಗಳು ತಮ್ಮ ನೆಟ್‌ವರ್ಕ್‌ಗಳನ್ನು ಸುಧಾರಿಸುವ ನಿಟ್ಟಿನಲ್ಲಿ ಈಗೀಗ ಪ್ರಮುಖ ಹೆಜ್ಜೆ ಇಡುತ್ತಿವೆ. ದೇಶದ ಮೂಲೆಮೂಲೆಗೂ ಇಂಟರ್‌ನೆಟ್ ಕಲ್ಪಿಸಲು ಪಣತೊಟ್ಟಿವೆ. ಅದರ ಭಾಗವಾಗಿ 'ವೊವೈಫೈ' ಚಾಲ್ತಿಗೆ ಬಂದಿದೆ. ಇದನ್ನು ಸಕ್ರಿಯಗೊಳಿಸಲು ಹೀಗೆ ಮಾಡಿ.

- ಸ್ಮಾರ್ಟ್‌ಫೋನ್‌ನ ಸೆಟ್ಟಿಂಗ್ಸ್ ತೆರೆಯಿರಿ.
- ಸಿಮ್ ಕಾರ್ಡ್ಸ್–ಮೊಬೈಲ್ ನೆಟ್‌ವರ್ಕ್ ಅಥವಾ ಕನೆಕ್ಷನ್ಸ್ ಆಯ್ಕೆ ಆರಿಸಿ.
- ನೀವು ಬಳಸುತ್ತಿರುವ ಬಿಎಸ್‌ಎನ್‌ಎಲ್ ಸಿಮ್ ಕಾರ್ಡ್ ಮೇಲೆ ಕ್ಲಿಕ್ ಮಾಡಿ.
- ಅಲ್ಲಿ ಕಾಣುವ ಮೇಕ್ ಕಾಲ್ಸ್ ಯೂಸಿಂಗ್ ವೈಫೈ ಅಥವಾ ವೈಫೈ ಕಾಲಿಂಗ್ ಆಯ್ಕೆ ಆನ್ ಮಾಡಿ.

